ಕರಾಸಕೈಅನಿನಿ

# ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
## ತುಮಕೂರು ವಿಭಾಗ

## ಸಾರ್ವಜನಿಕ ಪ್ರಾಧಿಕಾರದ ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳ ವಿವರ:-

### ಅದರ ಕಾರ್ಯಗಳ ನಿರ್ವಹಣೆಗೆ ಅದು ರೂಪಿಸಿರುವ ಸೂತ್ರಗಳನ್ನು:-

1. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು ಕರ್ನಾಟಕ ಸರ್ಕಾರದ ಒಂದು ಸಾರ್ವಜನಿಕ ಉದ್ಯಮವಾಗಿದ್ದು, ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಉತ್ತೇಜನ ನೀಡಲು ರೂಪುಗೊಂಡ ಸಂಸ್ಥೆಯಾಗಿದೆ. ನಿರುದ್ಯೋಗಿಗಳಿಗೆ ಸ್ವಯಂ ಉದ್ಯೋಗ ನಡೆಸಲು ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಅವಶ್ಯವಿರುವ ನಿವೇಶನಗಳನ್ನು ಅಲ್ಲದೇ ನಿರ್ಮಾಣ ಮಾಡಿರುವ ಮಳಿಗೆಗಳನ್ನು ಕಂತು ಆಧಾರದಲ್ಲಿ ಹಂಚಿಕೆ ಮಾಡಲಾಗುತ್ತದೆ. ವಿವಿಧ ಕೈಗಾರಿಕೋದ್ಯಮಿಗಳಿಗೆ/ ಘಟಕಗಳಿಗೆ / ಕಂಪೆನಿಗಳಿಗೆ ನಿಗಮದ ನಿಯಮಾನುಸಾರ ಬೇಡಿಕೆ ಸಮೀಕ್ಷೆ ನಡೆಸಿ ಬೇಡಿಕೆ ಇರುವ ಕಚ್ಚಾ ವಸ್ತುಗಳನ್ನು ರಿಯಾಯಿತಿ ದರದಲ್ಲಿ ಸರಬರಾಜು ಮಾಡುವುದು ಹಾಗೂ ಸರ್ಕಾರಿ ಭೂಮಿಗಳನ್ನು ನಿಯಮಾನುಸಾರ ಸ್ವಾಧೀನಪಡಿಸಿಕೊಂಡು ಅಭಿವೃದ್ಧಿಪಡಿಸಿ, ಸಣ್ಣ ಕೈಗಾರಿಕಾ ಘಟಕಗಳಿಗೆ ಮಳಿಗೆ/ನಿವೇಶನಗಳನ್ನು ಹಂಚಿಕೆ ಮಾಡುವ ಮೂಲ ಉದ್ದೇಶ ಹೊಂದಿರುತ್ತದೆ. SAIL, JSW, ESSAR, JINDAL ಕಂಪೆನಿಗಳಿಂದ ಕಬ್ಬಿಣ ಮತ್ತು ಉಕ್ಕುಗಳನ್ನು ನೇರವಾಗಿ ಪಡೆದು ಮಾರಾಟ ಮಾಡುವುದು ವಿಶೇಷವಾಗಿದೆ.

   ತುಮಕೂರು ವಿಭಾಗೀಯ ಕಛೇರಿಗೆ ತುಮಕೂರು ಜಿಲ್ಲೆ, ಕೋಲಾರ ಜಿಲ್ಲೆ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳನ್ನೊಳಗೊಂಡಿದೆ. ಈ ಜಿಲ್ಲೆಗಳಲ್ಲಿ ಸ್ಥಾಪಿಸಿರುವ ಕೈಗಾರಿಕಾ ವಸಾಹತುಗಳ ವಿವರಗಳು;

| ಕ್ರಮ ಸಂಖ್ಯೆ | ಕೈಗಾರಿಕಾ ವಸಾಹತು | ವಿಸ್ತೀರ್ಣ ಎಕರೆಗಳಲ್ಲಿ | ಕೈವ ಸ್ಥಾಪಿಸಿದ ವರ್ಷ | ಮಳಿಗೆಗಳ ಸಂಖ್ಯೆ | ನಿವೇಶನಗಳ ಸಂಖ್ಯೆ |
|---|---|---|---|---|---|
| | | **ತುಮಕೂರು ಜಿಲ್ಲೆ** | | | |
| 1 | ತುಮಕೂರು | 15.80 A | 1965 | 32 | 41 |
| 2 | ಹಿರೇಹಳ್ಳಿ | 5.35 A | 1985 | 20 | 16 |
| 3 | ತಿಪಟೂರು | 10.00 A | 1982 | 20 | 44 |
| 4 | ಕುಣಿಗಲ್ | 8.10 A | 1986 | 16 | 31 |
| 5 | ಶಿರಾ | 4.00 A | 1968 | 15 | 13 |
| 6 | ಮಧುಗಿರಿ | 6.37 A | 1994 | 14 | 20 |
| 7 | ಅಂತರಸನಹಳ್ಳಿ-1 | 16.00 A | 1985 | 18 | 04 |
| 8 | ಅಂತರಸನಹಳ್ಳಿ-2 | 34.22 A | 2001 | 09 | 138 |
| 9 | ಪಾವಗಡ | 53.46 A | 2010 | - | 88 |
| 10 | ಯಲಿಯೂರು | 31.57 A | 2006 | - | - |
| | | | ಒಟ್ಟು | **144** | **395** |
| | | **ಕೋಲಾರ ಜಿಲ್ಲೆ** | | | |
| 1 | ಮೈಸೂರು ಲ್ಯಾಂಪ್ಸ್ | - | - | - | 58 |
| 2 | ಕೋಲಾರ | 25.82A | 1983 | 32 | 22 |
| 3 | ಕೆ.ಜಿ.ಎಫ್. | 16.00A | 1962 | 42 | 11 |
| 4 | ಮಾಲೂರು | 6.86A | 1986 | 16 | 17 |
| 5 | ಮುಳಬಾಗಲು | 5.00A | 1986 | 10 | 14 |
| 6 | ಕ್ಯಾಲನೂರು | 3.07A | 1994 | 10 | 3 |
| | | | ಒಟ್ಟು | **110** | **125** |
| | | **ಚಿಕ್ಕಬಳ್ಳಾಪುರ ಜಿಲ್ಲೆ** | | | |
| 1 | ಚಿಂತಾಮಣಿ | 21.42 A | 1985 | 20 | 6 |
| 2 | ಮುದ್ದೇನಹಳ್ಳಿ | 7.77 A | 1984 | 12 | 7 |
| 3 | ಶಿಡ್ಲಘಟ್ಟ | 17.50 A | 1985 | 6 | 4 |
| 4 | ಗೌರಿಬಿದನೂರು | 5.47 A | 1984 | 8 | 26 |
| | | | ಒಟ್ಟು | **46** | **43** |

**ಕರಾಸಕೈಆನಿನಿ**

2. ರಾಜ್ಯ ಸರ್ಕಾರವು ರಾಜ್ಯದಲ್ಲಿ 1992-93ನೇ ಸಾಲಿನಲ್ಲಿ 802 ವಿಶಿಷ್ಟ ಕಾರ್ಯಾಗಾರಗಳನ್ನು ಗ್ರಾಮೀಣ ಪ್ರದೇಶದ ನಿರುದ್ಯೋಗಿ ಯುವಕ-ಯುವತಿಯರಿಗೆ ಕೈಗಾರಿಕೆ ನಡೆಸುವ ಸಲುವಾಗಿ ನಿರ್ಮಾಣ ಮಾಡಿದ್ದು, ಇದರಿಂದ ಗ್ರಾಮೀಣ ಜನತೆಗೆ ಸಣ್ಣ ಕೈಗಾರಿಕೆ ಸ್ಥಾಪಿಸಲು ಆಸಕ್ತಿ ತಳೆಯಲು ಅನುಕೂಲಕರವಾಗಿರುತ್ತದೆ.

| ಕ್ರಮ ಸಂಖ್ಯೆ | ತಾಲ್ಲೂಕು | ಸಾಮೂಹಿಕ ಕಾರ್ಯಾಗಾರಗಳ ಒಟ್ಟು ಸಂಖ್ಯೆ | ಹಂಚಿಕೆಯಾದ ಸಾಮೂಹಿಕ ಕಾರ್ಯಾಗಾರಗಳ ಒಟ್ಟು ಸಂಖ್ಯೆ | ಖಾಲಿ ಇರುವ ಸಾಮೂಹಿಕ ಕಾರ್ಯಾಗಾರಗಳ ಒಟ್ಟು ಸಂಖ್ಯೆ | ಕ್ರಯಪತ್ರ ವಿತರಿಸಿದ ವಿವರ |
|---|---|---|---|---|---|
| | **ತುಮಕೂರು ಜಿಲ್ಲೆ** | | | | |
| 1 | ತುಮಕೂರು | 7 | 6 | 1 | 1 |
| 2 | ಗುಬ್ಬಿ | 8 | 8 | - | 4 |
| 3 | ಕುಣಿಗಲ್ | 5 | 3 | 2 | 2 |
| 4 | ಚಿಕ್ಕನಾಯಕನಹಳ್ಳಿ | 8 | 5 | 3 | 1 |
| 5 | ತಿಪಟೂರು | 6 | 6 | - | 1 |
| 6 | ತುರುವೇಕೆರೆ | 6 | 3 | 3 | 1 |
| 7 | ಮಧುಗಿರಿ | 5 | 4 | 1 | 1 |
| 8 | ಶಿರಾ | 7 | 5 | 2 | - |
| 9 | ಕೊರಟಗೆರೆ | 5 | 4 | 1 | 3 |
| 10 | ಪಾವಗಡ | 6 | 5 | 1 | 1 |
| | **ಒಟ್ಟು** | **63** | **49** | **14** | **15** |
| | **ಕೋಲಾರ ಜಿಲ್ಲೆ** | | | | |
| 1 | ಕೋಲಾರ | 6 | 4 | 2 | - |
| 2 | ಬಂಗಾರಪೇಟೆ | 6 | 2 | 4 | - |
| 3 | ಮಾಲೂರು | 4 | 2 | 2 | 1 |
| 4 | ಮುಳಬಾಗಲು | 6 | 3 | 3 | - |
| 5 | ಶ್ರೀನಿವಾಸಪುರ | 6 | 2 | 4 | - |
| | **ಒಟ್ಟು** | **28** | **13** | **15** | **1** |
| | **ಚಿಕ್ಕಬಳ್ಳಾಪುರ ಜಿಲ್ಲೆ** | | | | |
| 1 | ಚಿಕ್ಕಬಳ್ಳಾಪುರ | 3 | 2 | 1 | 1 |
| 2 | ಬಂಗಾರಪೇಟೆ | 6 | 1 | 5 | - |
| 3 | ಗುಡಿಬಂಡೆ | 4 | 1 | 3 | - |
| 4 | ಶಿಡ್ಲಘಟ್ಟ | 5 | 1 | 4 | 1 |
| 5 | ಗೌರಿಬಿದನೂರು | 6 | 3 | 3 | 3 |
| 6 | ಚಿಂತಾಮಣಿ | 5 | 4 | 1 | 3 |
| | **ಒಟ್ಟು** | **29** | **12** | **17** | **8** |
| **GRAND TOTAL** | | **120** | **74** | **46** | **24** |

**2) ಅಧಿಕಾರಿಗಳ ಮತ್ತು ಸಿಬ್ಬಂದಿ ವರ್ಗದ ಕರ್ತವ್ಯಗಳನ್ನು:- ತುಮಕೂರು ವಿಭಾಗೀಯ ಕಛೇರಿ:**

| ಕ್ರ.ಸಂ. | ಅಧಿಕಾರಿ | | ಕರ್ತವ್ಯ |
|---|---|---|---|
| 1 | ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ) | | ನಿಗಮದ ನಿಯಮಾನುಸಾರ ಪ್ರಧಾನ ಕಛೇರಿಯ ಸುತ್ತೋಲೆ ಆದೇಶಗಳನ್ವಯ ಕೆಲಸ ನಿರ್ವಹಿಸುವುದು ಹಾಗೂ ಕಾಲಕಾಲಕ್ಕೆ ಜಿಲ್ಲಾಧಿಕಾರಿಗಳು, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಇನ್ನಿತರೆ ಇಲಾಖೆಗಳು ಸೂಚಿಸಿದಂತೆ ಏಕಗವಾಕ್ಷಿ ಸಮಿತಿ ಸಭೆಗಳಿಗೆ ಹಾಜರಾಗುವುದು. ಕಚ್ಚಾವಸ್ತುಗಳ ಪೂರೈಕೆ. ನಮ್ಮ ಅಧೀನದಲ್ಲಿ ಬರುವ ಕೈಗಾರಿಕಾ ವಸಾಹತುಗಳಿಗೆ ಭೇಟಿ, ಬಾಡಿಗೆ/ಕಂತು ವಸೂಲಾತಿ ಇನ್ನಿತರೆ ಕೆಲಸಗಳು. **ಭೂಸ್ವಾಧಿನ ಪ್ರಕ್ರಿಯೆ ಬಗ್ಗೆ ಕ್ರಮ ಕೈಗೊಳ್ಳುವುದು**. ಹಾಗೂ KSIMC ಮಾರುಕಟ್ಟೆ ನಿಗಮದ ಬಾಕಿ ವಸೂಲಾತಿ ಕೆಲಸಗಳು. |
| 2 | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ಸಿವಿಲ್) | | ತುಮಕೂರು ಉಪ ವಿಭಾಗ ಮತ್ತು ದಾವಣಗೆರೆ ಉಪ ವಿಭಾಗದ ಹೆಚ್ಚುವರಿ ನಿರ್ವಹಣೆ. .ಜಿಲ್ಲೆಯ ಕೈಗಾರಿಕಾ ವಸಾಹತುಗಳ ನಿರ್ವಹಣೆ ಮತ್ತು ಉಸ್ತುವಾರಿ. ಹೊಸ ಕೈಗಾರಿಕಾ ವಸಾಹತುಗಳ ಯೋಜನಾ ವರದಿ ತಯಾರಿಸುವುದು. ಮಳಿಗೆ/ ನಿವೇಶನಗಳ ಅಳತೆಯೊಂದಿಗೆ ನಕ್ಷೆಗಳನ್ನು ನೀಡುವುದು. ನಿವೇಶನದಲ್ಲಿ ಕಟ್ಟಡ ನಿರ್ಮಾಣಕಾರ್ಯಕ್ಕಾಗಿ ನೀಲಿ ನಕ್ಷೆಗಳ ಅನುಮೋದನೆ ಇತ್ಯಾದಿ. ಹೊಸ ಕೈಗಾರಿಕಾ ವಸಾಹತುಗಳ ಅಭಿವೃದ್ಧಿ ನಿರ್ವಹಣೆಗೆ ಇತ್ಯಾದಿ ಇಂಜಿನಿಯರಿಂಗ್ ಸಂಬಂಧಿಸಿದ ಕೆಲಸಗಳನ್ನು ನಿರ್ವಹಿಸುವುದು. ಮತ್ತು ಅಂದಾಜು ಪಟ್ಟಿಗಳ ಪರಿಶೀಲನೆ ಇನ್ನಿತರೆ. |
| 3 | ಸಹಾಯಕ ಅಭಿಯಂತರರು (ಸಿವಿಲ್) | | ಮೇಲಾಧಿಕಾರಿಗಳ ಆದೇಶದಂತೆ ತುಮಕೂರು ಜಿಲ್ಲೆಯ ಕೈಗಾರಿಕಾ ವಸಾಹತುಗಳ ನಿರ್ವಹಣೆ ಮತ್ತು ಉಸ್ತುವಾರಿ. ಹೊಸ ಕೈಗಾರಿಕಾ ವಸಾಹತುಗಳ ಯೋಜನಾ ವರದಿ ತಯಾರಿಸುವುದು ಮಳಿಗೆ/ ನಿವೇಶನಗಳ ಅಳತೆಯೊಂದಿಗೆ ನಕ್ಷೆಗಳನ್ನು ನೀಡುವುದು. ನಿವೇಶನದಲ್ಲಿ ಕಟ್ಟಡ ನಿರ್ಮಾಣ ಕಾರ್ಯಕ್ಕಾಗಿ ನೀಲಿ ನಕ್ಷೆಗಳ ಪರಿಶೀಲನೆ ಮತ್ತು ಮಂಡನೆ ಇತ್ಯಾದಿ. ಹೊಸ ಕೈಗಾರಿಕಾ ವಸಾಹತುಗಳ ಅಭಿವೃದ್ಧಿ ನಿರ್ವಹಣೆಗೆ ಅಂದಾಜು ಪಟ್ಟಿ ತಯಾರಿಸುವುದು ಇತ್ಯಾದಿ. ಇಂಜಿನಿಯರಿಂಗ್ ಸಂಬಂಧಿಸಿದ ಕೆಲಸಗಳನ್ನು ಮೇಲಾಧಿಕಾರಿಗಳ ಆದೇಶದಂತೆ ನಿರ್ವಹಿಸುವುದು. |
| 4 | ಹಿರಿಯ ಸಹಾಯಕರು-I (ವಿಷಯ ನಿರ್ವಾಹಕರು) | 1) | ತುಮಕೂರು ಜಿಲ್ಲೆಯ ತುಮಕೂರು ಬಿ.ಹೆಚ್.ರಸ್ತೆ, ಅಂತರಸನಹಳ್ಳಿ, ಹಿರೇಹಳ್ಳಿ, ಕುಣಿಗಲ್, ಯಲಿಯೂರು, ಮತ್ತು ಕಡುಮಲಕುಂಟೆ ಕೈಗಾರಿಕಾ ವಸಾಹತುಗಳಿಗೆ ಸಂಬಂಧಿಸಿದ ಕಾರ್ಯ ಮತ್ತು ಕಡತಗಳನ್ನು ನಿರ್ವಹಿಸುವುದು. |
| | | 2) | ತುಮಕೂರು ಜಿಲ್ಲೆಯ ಜಿಲ್ಲಾ ಕೈಗಾರಿಕಾ ಕೇಂದ್ರಗಳ ಸಭೆ ಮತ್ತು ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಗಳಿಗೆ ಸಂಬಂಧಿಸಿದ ಕಾರ್ಯ ಕಡತಗಳನ್ನು ನಿರ್ವಹಿಸುವುದು, ವೇಳೆಗೆ ಸರಿಯಾಗಿ ಅನುಸರಣಾವರದಿ ಕಳುಹಿಸಿ ಕೊಡುವ ಕಾರ್ಯ ನಿರ್ವಹಿಸುವುದು. |
| | | 3) | ವಿಭಾಗೀಯ ಕಛೇರಿ ವ್ಯಾಪ್ತಿಯಲ್ಲಿ ಬರುವ ನ್ಯಾಯಾಲಯದ ಮೊಕದ್ದಮೆಗಳ ಮಾಸ್ಟರ್ ರಿಜಿಸ್ಟರ್, ಕಡತ ಮತ್ತು ಮಾಹಿತಿ ಹಕ್ಕು ಅಧಿನಿಯಮದ ಅಡಿಯಲ್ಲಿ ಬರುವ ಅರ್ಜಿಗಳ ಮಾಸ್ಟರ್ ರಿಜಿಸ್ಟರ್ ಮತ್ತು ಕಡತ ನಿರ್ವಹಿಸುವುದು. |
| | | 4) | ವಿಭಾಗೀಯ ಕಛೇರಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕೈಗಾರಿಕಾ ವಸಾಹತುಗಳ ಆಸ್ತಿ ತೆರಿಗೆ ಸಮಯಕ್ಕೆ ಸರಿಯಾಗಿ ಪಾವತಿಸಿ ಕೇಂದ್ರ ಕಛೇರಿಗೆ ವರದಿ ಸಲ್ಲಿಸುವುದು ಹಾಗೂ ಕಡತಗಳು, ರಿಜಿಸ್ಟರ್ ಮತ್ತು ಮಾಸ್ಟರ್ ಕಡತ ನಿರ್ವಹಿಸುವುದು. |
| | | 5) | ತುಮಕೂರು ವಿಭಾಗೀಯ ಕಛೇರಿಯ ಆಡಳಿತ ಮತ್ತು ಸಿಬ್ಬಂದಿಗೆ ಸಂಬಂಧಿಸಿದ ವಿಷಯಗಳ ಕಡತಗಳನ್ನು ಮತ್ತು ಕೈಗಾರಿಕಾ ಆದಾಲತ್ತಿಗೆ ಸಂಬಂಧಿಸಿದ ಕಡತ ನಿರ್ವಹಿಸುವುದು ಹಾಗೂ ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆ (DLSAC), ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ತುಮಕೂರು ರವರ ಮಾಸಿಕ ಪ್ರಗತಿ ಪರಿಶೀಲನಾ ಸಭೆಗೆ ಹಾಜರಾಗುವುದು ಇನ್ನಿತರೆ. |